

ಬಾನೆಟ್ ಮೇಲೆ ಜೈಪುರದ ಎನಾಮಲ್ ಕಲೆ (ಮೇಲಿನ ಚಿತ್ರ)

ಮುತ್ತು, ಹರಳು ಜೋಡಣೆ (ಕೆಳ ಚಿತ್ರ)



ಅರಿತ ಕೋಲ್ಕತ್ತಾ ಕುಶಲಕರ್ಮಿಗಳು, ಮಿನಾಕರಿ– ಎನಾಮಲ್ ಕೌಶಲವರಿತ ಜೈಪುರ ಅಕ್ಕಸಾಲಿಗರನ್ನು ಕರೆಸಲಾಗಿದೆ. ಜೊತೆಗೆ 'ಫಿಲಿಗ್ರಿ' (ಚಿನ್ನದ ತಂತಿಗಳನ್ನು ವಿನ್ಯಾಸಕ್ಕೆ ತಕ್ಕಂತೆ ಬಗ್ಗಿಸುವುದು), 'ತೇವಾ' (ಗಾಜಿನ ಮೇಲೆ ಚಿನ್ನದ ರೇಖುಗಳನ್ನು ಜೋಡಿಸುವುದು) ಮೊದಲಾದ ಆಭರಣ ವಿನ್ಯಾಸಗಳೆಲ್ಲವೂ ಈ ಕಾರಿನಲ್ಲಿ ಮಿಳಿತಗೊಂಡಿವೆ.

ಕಾರಿನ ಬಾನೆಟ್‌ನತ್ತ ಎಲ್ಲರ ದೃಷ್ಟಿ ಇರುವುದು ಸಹಜ. ಹೀಗಾಗಿ ಕುಸುರಿ ಕೆಲಸ, ಹರಳು, ಮುತ್ತುಗಳ ಜೋಡಣೆಗೆ ಇಲ್ಲಿ ಪ್ರಾಶಸ್ತ್ಯ ನೀಡಲಾಗಿದೆ. ಹರಳುಗಳ ಪುಡಿಯನ್ನು ದ್ರಾವಣದಲ್ಲಿ ಕಲಸಿ ಕೆತ್ತನೆ ಮೇಲೆ ಬಣ್ಣ ಸವರುವ 'ಎನಾಮಲ್' ಕೆಲಸವನ್ನು ಜೈಪುರದ ಕಲಾವಿದರು ಮಾಡುತ್ತಿದ್ದಾರೆ. ಅದರಂತೆ ನವಿಲಿನ ವಿನ್ಯಾಸಕ್ಕೆ ಬಿಳಿ ಅಮೆರಿಕನ್ ಡೈಮಂಡ್, ಮುತ್ತು, ಹವಳ, ಪಚ್ಚೆ (ಎಮರಾಲ್ಡ್) ಮತ್ತು ಕೆಂಪು (ರೂಬಿ) ಹರಳುಗಳನ್ನು ಜೋಡಿಸುವ ಅತ್ಯಂತ ಸೂಕ್ಷ್ಮ ಕೆಲಸ  ನುರಿತ ಅಕ್ಕಸಾಲಿಗರದ್ದು.

ಗಾಲಿಯ ಮಧ್ಯೆ ಜೋಡಿಸುವ ಚಕ್ರಾಕಾರದ ಪ್ಲೇಟ್ ಮೇಲೆ ಮಾಡಿರುವ ಸೂಕ್ಷ್ಮ ಕೆತ್ತನೆಗಳು ಬೆರಗುಗೊಳಿಸುವಂಥದ್ದು. ವಿವಿಧ ಬಗೆಯ ಆಭರಣಗಳ ವಿನ್ಯಾಸವನ್ನು ಇಲ್ಲಿ ಪಡಿಮೂಡಿಸಲಾಗಿದೆ. ಮಡ್‌ಗಾರ್ಡ್ ಮಾತ್ರ ಬೆಳ್ಳಿಯದ್ದು. ಕಾರಿಗೆ ಎಲ್ಲೆಲ್ಲಿ ಗಾಜು ಇರುತ್ತದೋ ಅಲ್ಲಿ ಹಾಗೇ ಗಾಜನ್ನು ಬಿಡಲಾಗಿದೆ. ಅಂದರೆ ಮುಂಭಾಗ, ಕಿಟಕಿ ಮೊದಲಾದವು. ಆದರೆ ಅಂಚಿನಲ್ಲಿ ಚಿನ್ನದ ಪಟ್ಟಿಯನ್ನೇ ಜೋಡಿಸಲಾಗಿದೆ.

'ಕಳೆದ ಏಪ್ರಿಲ್‌ನಲ್ಲಿ ಕೆಲಸ ಶುರುವಾಗಿದ್ದು ಕೊನೆಯಲ್ಲಿ ನ್ಯಾನೊ ಕಾರಿನ ಮೇಲೆ ಚಿನ್ನದ ತಗಡು ಜೋಡಿಸುವ ಕೆಲಸ ನಮ್ಮ ಡೆಹ್ರಾಡೂನ್ ಘಟಕದಲ್ಲಿ ನಡೆಯಲಿದೆ' ಎನ್ನುತ್ತಾರೆ ತಂಡದ ಹೊಣೆ ಹೊತ್ತ ಕುಮಾರವೇಲು. ಅವರ ಪ್ರಕಾರ ಆಗಸ್ಟ್ 15ರ ಹೊತ್ತಿಗೆ ದೆಹಲಿ ಅಥವಾ ಮುಂಬೈನಲ್ಲಿ ರತನ್ ಟಾಟಾ ಅವರು ಉದ್ಘಾಟನೆ ಮಾಡಬಹುದು. ನಂತರ ದೇಶದ ಹಲವು ಸಣ್ಣ ಪಟ್ಟಣಗಳಲ್ಲಿ ತೆರೆಯಲಾಗಿರುವ 'ಗೋಲ್ಡ್ ಪ್ಲಸ್' ಮಳಿಗೆಗಳಿಗೆ ಈ ಕಾರನ್ನು ಪ್ರದರ್ಶನಕ್ಕೆ ತೆಗೆದುಕೊಂಡು ಹೋಗಲಾಗುವುದು. ಕರ್ನಾಟಕದಲ್ಲಿ ಬೆಳಗಾವಿ ಮತ್ತು ಶಿವಮೊಗ್ಗದಲ್ಲಿ ಈ ಗೋಲ್ಡ್ ಪ್ಲಸ್ ಮಳಿಗೆಗಳಿವೆ.

ಈ ದುಬಾರಿ ಕಾರು 'ಜಗತ್ತಿನ ಮೊದಲ ಚಿನ್ನದ ಕಾರು' ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.